Ex.No. 71/2015
ಡಿ.ಡಬ್ಲ್ಯು–01

**ಸಾಕ್ಷಿಯನ್ನು ದಿನಾಂಕಃ 24.01.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಡಿಕ್ರಿದಾರರ ಪರ ಶ್ರೀ. ಎಸ್.ಕೆ.ಜಿ. ವಕೀಲರಿಂದಃ**

ನಾನು ಪಿ.ಎ.ಸಿ.ಎ.ಆರ್.ಡಿ. ಬ್ಯಾಂಕ್ ನಲ್ಲಿ 2012–2013 ನೇ ಸಾಲಿನಲ್ಲಿ ರೂ. 35,000/– ಫೆನ್ಸಿಂಗ್ ಸಾಲ ಪಡೆದುಕೊಂಡಿದ್ದೆ. ಸಾಲ ಪಡೆಯುವ ಕಾಲಕ್ಕೆ ಬ್ಯಾಂಕಿಗೆ ಏನು ದಾಖಲೆಗಳನ್ನು ಕೊಟ್ಟಿದ್ದೀರಿ ಎಂದು ಕೇಳಲಾಗಿ ಸಾಕ್ಷಿಯು ಪಹಣಿ ಪತ್ರಿಕೆ ಮಾತ್ರ ಎಂದು ನುಡಿಯುತ್ತಾರೆ. ರೂ. 35,000/– ಸಾಲದ ಹಣದ ಭದ್ರತೆಗಾಗಿ ತಾವೇನಾದರೂ ಅಡಮಾನ ಪತ್ರ ಮಾಡಿಕೊಟ್ಟಿದ್ದೀರಾ ಎಂದು ಕೇಳಲಾಗಿ ಸಾಕ್ಷಿಯು ಇಲ್ಲಾ ಎನ್ನುತ್ತಾರೆ.

ತಾವು ಎಸ್.ಬಿ.ಐ. ಬ್ಯಾಂಕಿನಲ್ಲಿ ಎಷ್ಟು ಸಾಲ ತೆಗೆದುಕೊಂಡಿದ್ದೀರಾ ಎಂದು ಕೇಳಲಾಗಿ ಸಾಕ್ಷಿಯು ಒಮ್ಮೆ ರೂ. 50,000/–, ಇನ್ನೊಮ್ಮೆ ರೂ. 3,00,000/– ಸಾಲ ಪಡೆದುಕೊಂಡಿರುತ್ತೇನೆಂದು ನುಡಿಯುತ್ತಾರೆ. ಪಿ.ಎ.ಸಿ.ಎ.ಆರ್.ಡಿ. ಬ್ಯಾಂಕ್ ನಲ್ಲಿ ರೂ. 35,000/– ಹಣವನ್ನು ಫೆನ್ಸಿಂಗ್ ನಿರ್ಮಾಣ ಮಾಡಲು ತೆಗೆದುಕೊಂಡಿದ್ದೆ ಎಂದು ತಾವು ಹೇಳಿದ್ದು, ಎಷ್ಟು ಅವಧಿಗೆ ಸದರಿ ಸಾಲ ಪಡೆದಿದ್ದೀರಿ ಎಂದು ಕೇಳಲಾಗಿ ಸಾಕ್ಷಿಯು 05 ವರ್ಷದ ಅವಧಿಗೆ ಎಂದು ನುಡಿಯುತ್ತಾರೆ. ಎಷ್ಟು % ಬಡ್ಡಿ ಕಟ್ಟುವಂತೆ ಬ್ಯಾಂಕಿನವರು ಹೇಳಿದ್ದರು ಎಂದು ಕೇಳಲಾಗಿ ಸಾಕ್ಷಿಯು ವಾರ್ಷಿಕ 2% ಬಡ್ಡಿ ಎಂದು ನುಡಿಯುತ್ತಾರೆ. 2% ಬಡ್ಡಿ ಎಂದು ತಾವು ಹೇಳಿದ್ದು ತಮ್ಮ ಬಳಿ ಮುಚ್ಚಳಿಕೆ ಪತ್ರ ಏನಾದರೂ ಬರೆಸಿಕೊಂಡಿದ್ದರಾ ಎಂದರೆ ಸಾಕ್ಷಿಯು ಇಲ್ಲಾ ಎನ್ನುತ್ತಾರೆ. ನೀವು ಪಡೆದ ಸಾಲಕ್ಕೆ ಬಡ್ಡಿ ಏನೆಲ್ಲಾ ಕಟ್ಟುತ್ತಾ ಬಂದಿದ್ದಿರಾ ಎಂದು ಕೇಳಲಾಗಿ ಸಾಕ್ಷಿಯು 01 ವರ್ಷ ಬಡ್ಡಿ ಕಟ್ಟಿರಲಿಲ್ಲ, ನಂತರ ಇನ್ನೊಂದು ವರ್ಷದಲ್ಲಿ ಅಸಲು ಹಣವನ್ನು ಬಡ್ಡಿ ಸಮೇತ ಕಟ್ಟಿದ್ದು, ಸದರಿ ಹಣವನ್ನು ಕಟ್ಟಿದ ನಂತರ ಬ್ಯಾಂಕಿನವರು ನನಗೆ ಎನ್.ಡಿ.ಸಿ. (No Due Certificate) ಕೊಟ್ಟಿರುತ್ತಾರೆ. ಬ್ಯಾಂಕಿಗೆ ತಾವು ಕಟ್ಟಬೇಕಾಗಿದ್ದ ಅಸಲು ಸಾಲ ಮತ್ತು ಬಡ್ಡಿಯನ್ನು

ಯಾವಾಗ ಪಾವತಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಈಗ ತುಂಬಾ ವರ್ಷವಾಗಿದೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಎಷ್ಟು ಹಣವನ್ನು ಬ್ಯಾಂಕಿಗೆ ತಾವು ಕಟ್ಟಿರುತ್ತೀರಿ ಎಂದು ಕೇಳಲಾಗಿ ಸಾಕ್ಷಿಯು ಎಷ್ಟು ಹಣ ಕಟ್ಟಿರುತ್ತೇನೆಂದು ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಬ್ಯಾಂಕಿಗೆ ಹಣ ಕಟ್ಟಿದ ಬಗ್ಗೆ ಹಣ ಪಾವತಿ ರಸೀದಿ ತಮ್ಮ ಬಳಿ ಇದೆಯಾ ಎಂದರೆ ಸಾಕ್ಷಿಯು ಬ್ಯಾಂಕಿನವರು ರಸೀದಿ ಕೊಟ್ಟಿರುವುದಿಲ್ಲ, ಈ ವಿಚಾರವನ್ನು ನಾನು ಈ ಮೊದಲೇ ಹೇಳಿರುತ್ತೇನೆಂದು ನುಡಿಯುತ್ತಾರೆ. ಹಣ ಕಟ್ಟಿದ ರಸೀದಿ ಕೊಟ್ಟಿಲ್ಲ ಎಂದು ಬ್ಯಾಂಕಿನವರ ವಿರುದ್ಧ ತಾವು ಪಿರ್ಯಾದು ಏನಾದರೂ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಪಿರ್ಯಾದು ಕೊಟ್ಟಿಲ್ಲ ಎಂದು ನುಡಿದು ಸಾಕ್ಷಿಯು ಮುಂದುವರಿದು ಬ್ಯಾಂಕಿನವರು ಹಣ ಕಟ್ಟಿಸಿಕೊಂಡು ನನಗೆ ಎನ್.ಡಿ.ಸಿ. ಕೊಟ್ಟ ನಂತರ ನಾನ್ಯಾಕೆ ಅವರ ವಿರುದ್ಧ ಪಿರ್ಯಾದು ಮಾಡಿ ಕೋರ್ಟು-ಕಛೇರಿ ಅಲೆಯಲಿ ಎಂದು ನುಡಿಯುತ್ತಾರೆ. ಬ್ಯಾಂಕಿಗೆ ಸಾಲ ಮರುಪಾವತಿ ಮಾಡಿ ಎನ್.ಡಿ.ಸಿ. ಪಡೆದಿರುತ್ತೇನೆಂದು ಹೇಳಿದ್ದು ತಾವು ಬ್ಯಾಂಕಿಗೆ ಹಾಜರುಪಡಿಸಿದ ದಾಖಲೆಗಳನ್ನು ಹಿಂಪಡೆದಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ನಾನು ಪಹಣಿ ಪತ್ರಿಕೆ ಮಾತ್ರ ಕೊಟ್ಟಿದ್ದೆ, ಹಾಗಾಗಿ ಹೊಸ ಪಹಣಿ ತೆಗೆದುಕೊಳ್ಳುವ ಅವಕಾಶ ಇದ್ದುದರಿಂದ ನಾನು ಸದರಿ ಪಹಣಿಯನ್ನು ಬ್ಯಾಂಕಿನವರಿಂದ ಪಡೆದಿಲ್ಲ ಎನ್ನುತ್ತಾರೆ. ನಿ.ಡಿ.-1 No Due Certificate ಅನ್ನು ಎಲ್ಲಿಗೆ ಕೊಡಲು ತಯಾರು ಮಾಡಿಸಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ಎಸ್.ಬಿ.ಐ. ಬ್ಯಾಂಕಿನಲ್ಲಿ ಸಾಲ ಪಡೆಯುವ ಉದ್ದೇಶದಿಂದ ಪಿ.ಎ.ಸಿ.ಎ.ಆರ್.ಡಿ. ಬ್ಯಾಂಕ್ ನಿಂದ ಎನ್.ಡಿ.ಸಿ. ಪಡೆದುಕೊಂಡಿರುತ್ತೇನೆಂದು ನುಡಿಯುತ್ತಾರೆ. ನಿ.ಡಿ.-1 ದಾಖಲೆಯನ್ನು 2010 ರಲ್ಲಿ ಬರೆಸಿಕೊಂಡಿರುತ್ತೇನೆಂದರೆ ಸರಿ. ನಿ.ಡಿ.-1 ದಾಖಲೆಯಲ್ಲಿ ಮೇಲ್ಕಂಡ ಅರ್ಜಿದಾರರು ನಮ್ಮ ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದು, ಕಂತು ಪಾವತಿಸಿದ್ದು, ದಿನಾಂಕಃ 12.10.2010 ಕ್ಕೆ ಸುಸ್ತಿದಾರರಲ್ಲಾ ಎಂದು ಬರೆದಿದೆ ಎಂದರೆ ಸಾಕ್ಷಿಯು ಬ್ಯಾಂಕಿನವರು ಆ ರೀತಿ ಬರೆದುಕೊಂಡಿರಬಹುದು ಎಂದು

ನುಡಿಯುತ್ತಾರೆ. ನಿ.ಡಿ.-1 ದಾಖಲೆಯನ್ನು ಬರೆದುಕೊಟ್ಟ ನಂತರ ಎಸ್.ಬಿ.ಐ. ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡಿರುತ್ತೇನೆಂದರೆ ಸರಿ. ನಾನು ಬ್ಯಾಂಕಿನವರಿಂದ ಪಡೆದಿದ್ದ ಸಾಲವನ್ನು ಸಂಪೂರ್ಣ ಕಟ್ಟಿಲ್ಲ, ದಿನಾಂಕಃ 10.12.2010 ಕ್ಕೆ ಕಟ್ಟಬೇಕಿದ್ದ ಕಂತಿನ ಹಣವನ್ನು ಮಾತ್ರ ಕಟ್ಟಿರುತ್ತೇನೆಂದರೆ ಸರಿಯಲ್ಲ. ನಾನು ದಿನಾಂಕಃ 10.12.2010 ಕ್ಕೆ ಸಾಲ ಸುಸ್ತಿದಾರನಲ್ಲದೇ ಇದ್ದುದರಿಂದ ಸಾಲ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ನಾನು ಬ್ಯಾಂಕಿನವರಿಗೆ ಕಟ್ಟಬೇಕಾದ ಸಂಪೂರ್ಣ ಹಣವನ್ನು ಕಟ್ಟದೇ ಇದ್ದು, ಎಸ್.ಬಿ.ಐ. ಬ್ಯಾಂಕಿನಲ್ಲಿ ಸಾಲ ಪಡೆಯುವ ಉದ್ದೇಶದಿಂದ ಪಿ.ಎ.ಸಿ.ಎ.ಆರ್.ಡಿ. ಬ್ಯಾಂಕ್ ನಲ್ಲಿ ಎನ್.ಒ.ಸಿ. ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಎನ್.ಒ.ಸಿ. ಪತ್ರವನ್ನೇ ಎಸ್.ಡಿ.ಸಿ. ಎಂದು ನಾನು ತಿರುಚುತ್ತಿದ್ದೇನೆಂದರೆ ಸರಿಯಲ್ಲ. ನಾನು ಸಾಲ ಪಡೆದ ಸಂದರ್ಭದಲ್ಲಿ ಬ್ಯಾಂಕಿಗೆ ಹಾಜರುಪಡಿಸಿದ್ದ ದಾಖಲೆಗಳು ಪಿ.ಎ.ಸಿ.ಎ.ಆರ್.ಡಿ. ಬ್ಯಾಂಕ್ ನ ಮುಖ್ಯ ಕಛೇರಿಯಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ನಾನು ಪಹಣಿ ಪತ್ರಿಕೆಯನ್ನು ಬಿಟ್ಟರೆ ಬೇರ್ಯಾವ ದಾಖಲೆಗಳನ್ನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಾನು ಬ್ಯಾಂಕ್ ಗೆ ಕಟ್ಟಬೇಕಾಗಿದ್ದ ಸಂಪೂರ್ಣ ಹಣವನ್ನು ಕಟ್ಟದೇ ಇದ್ದುದರಿಂದ ದಾಖಲೆಗಳನ್ನು ಹಿಂಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಬ್ಯಾಂಕಿನವರು ತಮ್ಮ ವಿರುದ್ಧ Arbitration ದಾವೆ ಮಾಡಿದ್ದು, ತಮಗೆ ನೋಟೀಸ್ ಏನಾದರೂ ಕೊಟ್ಟಿದ್ದಾರಾ ಎಂದರೆ ಸಾಕ್ಷಿಯು ಇಲ್ಲಾ ಎನ್ನುತ್ತಾರೆ. Arbitration ಆದೇಶವನ್ನು ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಸದರಿ Arbitration ಕೇಸಿನ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**